Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅಂಬಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

29—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಧರ್ಮವನ್ನು ಆಚರಿಸಿ

ಶ್ರೀ ಶೃಂಗೇರಿ ಜಗದ್ಗುರುಗಳವರು ನಿನ್ನೆ ರಾತ್ರಿ ಶ್ರೀ ಅಭಿನವ ಶಂಕರಾಲಯದಲ್ಲಿ ಉಪನ್ಯಾಸ ಮಾಡುತ್ತಾ, ಮಾನವ ಜಾತಿಗೆ 10 ಸೇರು ಅಕ್ಕಿ ಇದ್ದುದನ್ನು ನಾವು ಬಳ್ಳೆಸು ಈಗ 1 ಸೇರು ಆಗಿದೆ ಎಂದು ತಿಳಿದೆ ಅನಾಚಾರವೇ ಈ ರೀತಿ ಆಗಬೇಕಾದರೆ ಕಾರಣ ಆದ್ದರಿಂದ ಸರ್ವರೂ ಧರ್ಮಾಚರಣೆ ಮಾಡಬೇಕು ಎಂದರು

ಶಾನ್ತ್ಯುತ್ಸವ

ಪ್ರಾಪ್ತವಾಗಲಿರುವ ಅಷ್ಟಗ ಹ ಯೋಗ ದೋಷನಿವಾರಣೆಗಾಗಿ ವೈಸೂರಿನ ರಮಾವಿಲಾಸ ಅಗ್ರಹಾರದಲ್ಲಿ ಶ್ರೀ ಅಹೋಬಿಲ ಮಠದಲ್ಲಿ ತಾ|| 31—1—62 ರಿಂದ 9-2-62 ರ ವರೆಗೆ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳವರ ಅನುಗ್ರಹಪೂರ್ವಕವಾಗಿ ಶ್ರೀ ರಾಮ ಪಟ್ಟಾಭಿಷೇಕ ಮಹಾಯಾಗ ಸವಿಸ್ತರವಾಗಿ ಜರುಗಿಸುವರು.

ಗಾಂಧಿ ಸಪ್ತಾಹ

ಮೈಸೂರು ಡಿ ಸ್ಟ್ರಿಯಾ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ಮಾಹೆ 30 ರಿಂದ ಫೆಬ್ರವರಿ 6 ರ ವರೆಗೆ ಗೀತಾಜಯಂತಿ, ಗಾಂಧಿಸ್ಮಾರಕ ಶಾಂತಿ ಸಪ್ತಾಹ ಮತ್ತು ಅಷ್ಟಗ್ರಹ ಶಾಂತಿ ಮಹೋತ್ಸವವನ್ನು ಏರ್ಪಡಿಸಿದೆ 30 ನೇ ತಾ|| ಸಾಯಂಕಾಲ 6 ಪರಿ ಗಂಟೆಗೆ ಸಪ್ತಾಹದ ಉದ್ಘಾಟನೆಯನ್ನು ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ನೆರವೇರಿಸುವರು.

ಂಂ

ಮೈಸೂರು ನಗರ ಮತ್ತು ಜಿಲ್ಲಾ ಸ್ವತಂತ್ರ ಪಕ್ಷದ ಅಧ್ಯಕ್ಷರಾದ ಶ್ರೀ ಹೆಚ್ ನಿರಂಜನರಾಜ ಅರಸುರವರ ಅಧ್ಯಕ್ಷತೆಯಲ್ಲಿ ಸುಬ್ಬರಾಯನ ಕೆರೆಯಲ್ಲಿ ನಿನ್ನೆ ರಾತ್ರಿ ಪಕ್ಷದ ಚುನಾವಣೆಪ್ರಚಾರ ಸಭೆ ನಡೆಯಿತು

ಕ್ಷಿಪಣಿ ನಿರ್ಮಾಣ

ಎಂಡು ಅಥವ ಮೂರು ವರ್ಷಗಳಲ್ಲಿ ಭಾರತ ಬಾಹ್ಯಾಂತರಿಕ್ಷಕ್ಕೆ ಕ್ಷಿಪಣಿ ಹಾರಿಸಬಹುದೆಂದು ಆಬ್ಸರ್ವೇಟರಿ ಅಧಿಕಾರಿ ಡಾ|| ಪಿ ಆರ್ ಕೃಷ್ಣರಾವ್ ತಿಳಿಸಿದ್ದಾರೆ

ಮುಷ್ಕರ ನಿಂತಿತು

ತಿರುಪತಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮುಷ್ಕರ ನಿಂತಿತು

ಸೇನೆ ಜಮಾವಣೆ

ನೇಪಾಳ ಗಡಿಬಳಿ ಚೀನಿ ಸೇನೆ ಜಮಾವಣೆ ಆಗಿದೆ

ಚುನಾವಣೆ ಸ್ಪರ್ಧಿಗಳು

ಮೈಸೂರು ರಾಜ್ಯದಲ್ಲಿ 206 ಶಾಸನಸಭಾ ಸ್ಥಾನಗಳಿಗೆ 676 ಮಂದಿಯೂ, 26 ಲೋಕಸಭಾ ಸ್ಥಾನಗಳಿಗೆ 88 ಮಂದಿಯೂ ಕಟ್ಟಕಡೇ ಪಟ್ಟಿಯಂತೆ ಸ್ಪರ್ಧಿಸಿರುವರು — 72 ಶಾಸನಸಭಾ ಸ್ಥಾನಗಳಲ್ಲಿ 9 ಲೋಕಸಭಾಸ್ಥಾನಗಳಲ್ಲಿ ನೇರ ಹೊಡೆದಾಟವನ್ನು ಚುನಾವಣೆಗಳು ಕಾಣುವುವು — 63 ಕ್ಷೇತ್ರಗಳಲ್ಲಿ ಮೂರು ಮಂದಿಯಂತೆಯೂ, 40 ರಲ್ಲಿ 4 ಮಂದಿಯಂತೆಯೂ, 17 ರಲ್ಲಿ 5 ಮಂದಿಯಂತೆಯೂ, 6 ರಲ್ಲಿ 6 ಮಂದಿಯಂತೆಯೂ 4 ರಲ್ಲಿ 7 ಮಂದಿಯಂತೆಯೂ, 4 ರಲ್ಲಿ 9 ಮಂದಿಯಂತೆಯೂ ಸ್ಪರ್ಧಿಸುವರು — ಕಾಂಗ್ರೆಸಿಗರಾದ ಶ್ರೀ ದೇವರಾಜೇ ಅರಸಿನವರು ಹುಣಸೂರು ಕ್ಷೇತ್ರದಿಂದಲೂ ಶ್ರೀ ಜಿ ಎಸ್ ಪಾಟೀಲರು ತಾಳಿಕೋಟೆ ಕ್ಷೇತ್ರದಿಂದಲೂ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾದರು.

ನಾಳೆಯ ಪಂಚಾಂಗ

ಆಸ್ಥಾನ ವಿದ್ವಾನ್ ವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯ ಕೃಷ್ಣ ಜೋಯಿಸರಿಂದ

30 ಮಂಗಳವಾರ ನವಮಿ ವಿಶಾಖ

ಖಂಡನೆ

ನ್ಯೂಯಾರ್ಕ್ 28— ಪಶ್ಚಿಮ ಆಫ್ರಿಕಾ ದೇಶವಾದ ಅಂಗೋಲಾದಲ್ಲಿ ಪೋರ್ಚುಗೀಸರ ನೀತಿಯನ್ನು ಬ್ರಿಟನ್ನು ಮತ್ತು ಅಮೇರಿಕಾ ಖಂಡಿಸಿವೆ

ಆಗಮನ

ಸಂಯುಕ್ತ ಅಂಬ್ ಪ್ರಜಾತಂತ್ರಭುತ್ವದ ಉಪಾಧ್ಯಕ್ಷ ಹಿಬ್ಬರ್ಟ್ ಹಮ್ಫ್ರೀ ಅವರು ನಾಳೆ ಬೆಂಗಳೂರಿಗೆ ಆಗಮಿಸುತ್ತಾರೆ; ಗೌರ್ನರವರು ಡಿನ್ನರ್ ಏರ್ಪಡಿಸಿದ್ದಾರೆ.

ಹಾಜರಿರಲಿಲ್ಲ

ವಿಶ್ವಸಂಸ್ಥೆ— ಗುರುವಾರ ರಾತ್ರಿ ಏರ್ಪಡಿಸಲಾಗಿದ್ದ ಭಾರತ ರಿಪಬ್ಲಿಕ್ ದಿನ ಸತ್ಕಾರಕ್ಕೆ ಅಡ್ಲಾಯಿ ಸ್ಟೀವನ್ಸನ್ನರು ಹಾಜರಾಗಿರಲಿಲ್ಲ — ವಾಷಿಂಗ್ಟನ್ನಿನಲ್ಲಿ ಭಾರತ ರಾಯಭಾರಿ ಬಿ ಕೆ ನೆಹರು ಏರ್ಪಡಿಸಿದ್ದ ಸತ್ಕಾರಕ್ಕೆ 500 ಮಂದಿ ಅತಿಥಿಗಳು ಬಂದಿದ್ದರು.

ಪೋರ್ಚುಗಲ್ ಒಪ್ಪಿಗೆ

ಲಿಸ್ಬನ್— ಭಾರತ ಪೋರ್ಚುಗೀಸು ಸ್ಥಳಬಿಟ್ಟು ಹೊಂಡದ ಅಜ್ಞೆಗೆ ಒಳಗಾಗಿರುವರನ್ನು - ಅದಲುಬದಲಿಗೆ ಪೋರ್ಚುಗಲ್ಲು ಒಪ್ಪುವುದೆಂದೂ, ಬಿಡುಗಡೆ ಮಾಡಲ್ಪಟ್ಟ ಭಾರತೀಯರೂ ಮತ್ತು ಅವರ ಸಂಸಾರಂಗಳೂ ಪೋರ್ಚುಗೀಸು ದೇಶವನ್ನು ಬಿಟ್ಟು ಹೊಂಡಬೇಕೆಂದೂ ಪೋರ್ಚುಗಲ್ಲು ಭಾರತ ಸರಕಾರಕ್ಕೆ ತಿಳಿಸಿರುವುದೆಂದು ಪ್ರಕಟವಾಗಿದೆ.

ದಿವ್ಯವಾಣಿ

ನೀನು ಒಂದು ಒಳ್ಳೆಯ ಕಾರ್ಯವನ್ನು ಮಾಡಿದರೆ ಅದು ನಿನ್ನ ಹಿಂದಿನ ಕೆಟ್ಟ ಕಾರ್ಯವನ್ನು ತೊಡೆಯುತ್ತದೆ; ಹಿಂದಿನ ಪಾಪಗಳನ್ನು ಧ್ಯಾನ, ಜಪ ಮತ್ತು ಆಧ್ಯಾತ್ಮಿಕ ಚಿಂತನೆಗಳಿಂದ ಹೋಗಲಾಡಿಸಿಕೊಳ್ಳಬಹುದು.

— ಶ್ರೀ ಶಾರದಾಮಣಿದೇವಿ

ವಿವಿಧ ವಿಷಯಗಳು

ಪೀಕಿಂಗ್ — ರಿಪಬ್ಲಿಕ್ ದೇ ಸಮಾರಂಭದಲ್ಲಿ ಚೀನಾ ವಿದೇಶಾಂಗ ಮಂತ್ರಿ ಮಾರ್ಷಲ್ ಚೆನ್ ಇ ರವರು ಮಾಡಿದ ಭಾಷಣದಲ್ಲಿ — ಚೀನಾ ಮತ್ತು ಭಾರತಕ್ಕೆ ದೀರ್ಘ ಕಾಲದ ಶಾಂತಿಯ ಮತ್ತ ಸನ್ನಿವೇಶದ ಅವಶ್ಯಕತೆಯಿದೆ ಎಂದು ತಿಳಿಸಿದರು ; ಚೀನಾ-ಭಾರತ ಮೈತ್ರಿ ಬಗ್ಗೆ ಚೀನಾ ಸರಕಾರದ ನಿಲುವು ಬದಲಾಗದೆಂದೂ ಅದಕ್ಕಾಗಿಯೇ ಮುಂದೂ ಕಾರ್ಯ ನಡೆಸಲ್ಪಡುವುದೆಂದೂ ಹೇಳಿದರು.

ಂಂ

ಹತ್ತು ಕೋಟಿ ವರ್ಷಗಳ ಹಿಂದೆ ಜೀವಿಸಿತ್ತೆಂದೂಹಿಸಲಾದ ರಾಕ್ಷಸಾಕಾರದ ಡಿನೊಸೊರ್ ಪ್ರಾಣಿಯ ಹೆಜ್ಜೆಗಳ ಗುರುತುಗಳು ದಕ್ಷಿಣ ಇಂಗ್ಲೆಂಡಿನ ಒಂದು ಕಲ್ಪಣೆಯಲ್ಲಿ ಕಂಡುಬಂದಿವೆಯೆಂದು ವಂದಿಯಾಗಿದೆ

ಂಂ

ಕಾಟ್ಮಂಡುವಿನಲ್ಲಿ ಭಾರತ ರಾಯಭಾರಿ ಕಚೇರಿಯಲ್ಲಿ ನಡೆದ ರಿಪಬ್ಲಿಕ್ ದಿನ ಸಮಾರಂಭಕ್ಕೆ ಆಗಮಿಸಿದ್ದ ಸಾವಿರ ಮಂದಿ ಅತಿಥಿಗಳಲ್ಲಿ ನೇಪಾಳದ ಮಹಾರಾಜ ಮತ್ತು ಮಹಾರಾಣಿಯವರೂ ಇದ್ದರು.

ಂಂ

ಲಂಡನ್— ಭಾರತ ದೃಶ್ಯನೌಭರವ ಸಾದಾಯಕವಾಗಿದ್ದು ಶತ್ರುಮಟ್ಟಿಗೆ ಭಾರಿ ಕೈಗಾರಿಕಾ ರಾಷ್ಟ್ರವಾಗುವುದೆಂದು, ಪಂ | ನೆಹರು ಲಂಡನ್ ಟೈಮ್ಸ್ ಪತ್ರಿಕೆಗೆ ಕೊಟ್ಟಿರುವ ರಿಪಬ್ಲಿಕ್ ದೇ ಸಂದೇಶದಲ್ಲಿ ತಿಳಿಸಿರುವರು.

★

ತುಮಕೂರು — ಪಂ | ನೆಹರು ತುಮಕೂರಿಗೆ ಫೆಬ್ರವರಿ 6 ಬೆಳಿಗ್ಗೆ ಬಂದು ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು.

★

ಲಂಡನ್, ಕರಾಚಿ, ಹಾಂಕಾಂಗ್ ಬ್ಯಾಂಕಾಕ್ ಮುಂತಾದ ಕಡೆಗಳಲ್ಲಿ ಭಾರತ ಗಣರಾಜ್ಯ ಸಮಾರಂಭಗಳು ವೈಭವವಾಗಿ ನೆರವೇರಿದವು.

ಅದ್ಭುತ ವಜ್ರ

ಮೂವತ್ತು ವರ್ಷಗಳಿಂದ ಮಾಯವಾಗಿದ್ದ, ಪ್ರಾಯಶಃ ಭಾರತದಿಂದ ಬಂದಿರುವದಾಗಿದ್ದ, ಶತಮಾನಗಳ ಅಪೂರ್ವ ವಜ್ರವೊಂದು ಈಗ ಮಾರುಕಟ್ಟೆಗೆ ಬಂದಿರುವದಾಗಿ ಬೆಲ್ಜಿಯಂನ ಆಂಟ್ವರ್ಪಿನಲ್ಲಿ ಹೊಂಪಟ್ಟಿದೆ ; ಹಿಂದೆ ಬವಾರ್ಟಾ ಅಂಡ್ ವಿಟಲ್ಸ್‌ಬ್ಯಾಕ್ ವ ನೆತದ ಹಿರಿಯ ರಾಜಕುಮಾರನಾದ ರೂಪ್ರೆಕ್ಟರು ಯಾರೋ ಒಹಸ್ಯ ಸಂದರ್ಭದಲ್ಲಿ ಕೊಳ್ಳುವವರಿಗೆ ವಹಿಸಿದಾಗ ಇನ್ನು ಆದನ್ನು ಪತ್ತೇನಾಡಲು ಸಾಧ್ಯವಿಲ್ಲವೆಂದು ನಿರ್ಧರಿಸಲಾಗಿದ್ದಿತು. ಈ ಚೆ ಗೆ ಮೂ ರು ತಿಂಗಳ ಹಿಂದೆ ಆಂಟ್ವರ್ಪಿನ ವಜ್ರವ್ಯಾಪಾರ ಸಂಸ್ಥೆ, ಕಂಕೊವಾರ್ ಎಂಡ್ ಸನ್ಸ್ ಒಂವರು 25 ವಿಲಿಯ ಬೆಲ್ಜಿಯಂ ಫ್ರಾಂಕು [18೧೦೦೦ ಪೌಂಡು] ಗಳಿಗೆ ಒಂದು ಮನೆತನದ ಅಸ್ತಿಯಿಂದ ಕೊಂಡುಕೊಂಡರು : ಆದರೆ ಆ ಸಂಸ್ಥೆಯ ಮು ಖ್ಯಸ್ಥರಾದ ಕೊಂಕಮೆಂರು ಮಾರಿದ ಮನೆತನದ ಹೆಸರನ್ನು ತಿಳಿಸುವುದಿಲ್ಲವಾಗಿ ರುವರು 35-5೦ ಕ್ಯಾರೆಟ್ಟಿನ ಅಮೋಘ ನೀಲವಜ್ರ ಎಂದು ಖ್ಯಾತಿಗೊಂಡಿರುವ ಈ ರತ್ನದ ಇತಿಹಾವು 1664 ರಷ್ಟು ಹಿಂದಿನದ್ದಾಗಿದೆ ; ಆಗ ಹಾಪ್ಸ್‌ಬರ್ಗ್ ಮನೆತನದ ಸ್ಪೇನಿನ ಶಾಖೆಯು ಅವಿಚ್ಛಿನ್ನವಾದ ವಂಶಾವಳಿಯಿಂದ ಕೊಂಡಿತು ಎಂದು ಕೊಂಕ ಮರು ಹೇಳಿರುವರು ; ಈ ವಜ್ರವನ್ನು ವಿಟಿಲ್ಸ್‌ಬ್ಯಾಕ್ಸ್ ಮನೆತನವು 1722 ರಲ್ಲಿ ಪಡೆದು ಕೊಂಡು ತನ್ನ ರಾಜಮುಕುಟದಲ್ಲಿ ಸೇರಿಸಿದ್ದಿತು.

೦ ೦

ಸುಗಂಧ ದ್ರವ್ಯ

ಸುಗಂಧದ್ರವ್ಯಗಳು ಸ್ತ್ರೀಯರನ್ನು ಹೆಚ್ಚು ಆಕರ್ಷಣೀಯರನ್ನೂ ತನ್ನ ಕಡೆ ಒಲಿಸಿಕೊಳ್ಳುವಂಥವೂ ಆಗಿದ್ದರೂ ಇಂಗ್ಲೀಷು ಮಹಿಳೆಯರು ಇದಂ ವಿಷಯದಲ್ಲಿ ಹೆಚ್ಚು ಉತ್ಸಾಹಿಗಳಾಗಿಲ್ಲ ಫ್ರಾನ್ಸಿನಲ್ಲಿ ಸ್ತ್ರೀಜನಸಂಖ್ಯೆಯಲ್ಲಿ ಶೇಕಡ 96 ರಷ್ಟು ಮಂದಿ ನಿತ್ಯವೂ ಸುಗಂಧದ್ರವ್ಯವನ್ನು ಉಪಯೋಗಿಸುವರು : ಆದರೆ ಬ್ರಿಟನ್ನಿನಲ್ಲಿ ಸುಗಂಧದ್ರವ್ಯದ ವ್ಯಾಪಾರವು 3 ವರ್ಷಗಳಿಂದ ಹೆಚ್ಚುತ್ತಿದ್ದರೂ ಶೇಕಡ 20 ರಷ್ಟು ಮಂದಿ ಸ್ತ್ರೀಯರು ಮಾತ್ರ ಉಪಯೋಗಿಸುವರು ; ಸುಗಂಧ ದ್ರವ್ಯವನ್ನು ಸ್ವಲ್ಪವಾಗಿ ಉಪಯೋಗಿಸಬೇಕೆಂದೂ, ವಿಶೇಷ ಕಾಲಗಳಲ್ಲಿ ಉಪಯೋಗಿಸಬೇಕೆಂದೂ ಅವರು ತಿಳಿದಿರುವುದಾಗಿದೆ ; ಈಚಿನ ಹಲವು ವರ್ಷಗಳವರೆಗೆ ಪುರುಷರು ಸ್ತ್ರೀಯರಿಗಾಗಿ ಸುಗಂಧದ್ರವ್ಯಗಳನ್ನು ಕೊಳ್ಳುತ್ತಿದ್ದರು : ಆದರೆ ಈಗ ಸ್ತ್ರೀಯರಲ್ಲಿ ತಮಗೆ ಬೇಕಾದ ಸೆಂಟ್ ಕೊಳ್ಳುತ್ತಾರೆ.

೦ ೦

ಚಾಮರಾಜಮೊಹಲ್ಲ ತೆರಿಗೆದಾರರ ಸಂಘ

ಮೈಸೂರು 27 — ಮೇಲ್ಕಂಡ ಸಂಘದ ಆಶ್ರಯದಲ್ಲಿ ಗಣರಾಜ್ಯ ದಿನಾಚರಣೆ ಸಂಘದ ಅಧ್ಯಕ್ಷರಾದ ಡಾ || ಎಂ. ನಂಜಿಂಹಯ್ಯ ಪಂಡಿತರವರ ಅಧ್ಯಕ್ಷತೆಯಲ್ಲಿ ನಿನ್ನೆ ನೆಂವೇರಿತು. ಪ್ರಧಾನ ಕಾರ್ಯದರ್ಶಿಗಳವರಾದ ಶ್ರೀ ಎಂ ಕೆ ಮುಕುಂದರಾವ್‌ರವರು ಧ್ವಜಾರೋಹಣ ಮಾಡಿದರು ಸಭಾರಂಭದಲ್ಲಿ ಭಾಗವಹಿಸಿದ್ದವರಿಗೆ ಸಿಹಿ ಹಂಚಲಾಯಿತು.

೦ ೦

ವಿವಾಹಮಹೋತ್ಸವ

ಮೈಸೂರು ಸಿಟಿ ಮುನಿಸಿಪಲ್ ಆಫೀಸ್ ಕೌನ್ಸಿಲ್ ಕ್ಲಾರ್ಕ್ ಶ್ರೀಮಾನ್ ಹೆಚ್. ಎಸ್ ವೆಂಕಟನಾರಾಯಣಂರವರು, ತಮ್ಮ ಪುತ್ರಿ ಸೌ || ಶಾಂಭಳನ್ನು, ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ರೆವಿನ್ಯೂ ಇನ್‌ಸ್ಪೆಕ್ಟರ್ ಶ್ರೀಮಾನ್ ಜಿ. ಎ ಸುಂದರರಾಜ್‌ರವರ ಪುತ್ರ ಚಿ || ಜಿ. ಎಸ್. ವೆಂಕಟರಾಮುವಿಗೆ ಕೊಟ್ಟು ವಿವಾಹಮಹೋತ್ಸವವನ್ನು ಶುಕ್ರವಾರ ರಾಮಾನುಜ ಶಾಲೆಯಲ್ಲಿರುವ ಗುರುಕುಲದಲ್ಲಿ ವೈಭವವಾಗಿ ನೆರವೇರಿಸಿದರು.

“ಗೋರಕ್ಷಣ” ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ವುಡ್‌ಲಾಂಡ್ಸ್

26—1—62 ರಿಂದ — ಅಮೋಘ ಆರಂಭ

ಪ ಮಾ (ಹಿಂದಿ) SHAMA

ಪಾತ್ರ-ಸಂಯೋಜನೆ, ನಿರ್ಮಾಣ, ನಿರ್ದೇಶನ : ಸಂಗೀತ : ಗುಲಾಂ ಮಹಮದ್

ಅಮೋಘ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಅಪೆರಾ ವೈಭವ 5 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹರಿಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

SHAKTI SUDHA

A Superb Tonic



Automatic Interplanetary Station (Soviet Union)

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press, Chamarajapuram, Mysore 4.